ಅನುಮಾನ ಬರುತ್ತದೆ. ಇದರಲ್ಲಿ ಪೋಲೀಸರ ನಿರ್ಲಕ್ಷ್ಯ ಇದೆ. ಹೊಸ ವಾತಾವರಣ ಪೋಲೀಸರಲ್ಲಿದೆ. ಡೀ ಮಾರಲೈಸೇಷನ್ ಪೋಲೀಸರಲ್ಲಿ ಬರುತ್ತಿದೆ.

ಅಧ್ಯಕ್ಷರು.—ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಎಸ್. ಕೆ. ಕಾಂತ.—ಕವಿ ಹರಿದು ಹೋಯಿತು. ಮಾನ್ಯ ಮಂತ್ರಿಗಳು ಇಲ್ಲಿ ಲೋಕಲ್ ಆಗಿ ಕೆಲವರು ರೌಡಿಗಳನ್ನು ಹಿಡಿದುಕೊಂಡು ಇಂಥ ಒಂದು ಸಮಯ ಸಾಧಕತನದ ಕೆಲಸ ಮಾಡಿದ್ದಾರೆ ಎಂಬ ಊಹೆಯು ಬರುತ್ತದೆ ಎಂದು ಹೇಳಿದ್ದಾರೆ. ಅಂಥವರನ್ನು ಅಂದರೆ ನಮ್ಮ ಗುಲ್ಬರ್ಗಾದ ರೌಡಿಗಳ ಒಂದು ಲಿಸ್ಟ್ ಮಾಡಿ ಯಾರು ಡಕಾಯಿತಿ ಕೆಲಸ ಮಾಡತಕ್ಕಂಥವರು ಇದ್ದಾರೆ, ಅವರನ್ನು ಏನಾದರೂ ಬಂಧಿಸಿದ್ದಾರೆಯೇ ಅಥವಾ ಅವರನ್ನು ಏನಾದರೂ ವಿಚಾರಣೆ ಮಾಡಿದ್ದಾರೆಯೇ ಎಂಬ ಪ್ರಶ್ನೆ ಕೇಳಿದೆ. ಒಬ್ಬ ಹುಡುಗಿಯ ರಿಂಗನ್ನು ಕವಿಯು ಹರಿದು ಹೋಗುವಂತೆ ಕಿತ್ತುಕೊಂಡು ಹೋಗಿದ್ದಾನೆ. ಶ್ರೀ ಪ್ರಹ್ಲಾದರಾವ್ ಅವರ ಸ್ಥಿತಿ ಏನು ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಪೋಲೀಸರು ಬಹುಶಃ ಈ ಘಟನೆ ಕೇಳಿದಾಕ್ಷಣ ರೈಲ್ವೆ ಸ್ಟೇಷನ್, ಬಸ್ ಸ್ಟೇಷನ್ ಈ ಎರಡೂ ಕಡೆಗಳಲ್ಲಿ ವಿಷಯ ಸರಿಯಾಗಿ ತಿಳಿದಿದ್ದರೆ ಹೋಗುತ್ತಿದ್ದರು. ಬೇರೆ ಭಾಗದ ಪೋಲೀಸ್ ಅಧಿಕಾರಿಗಳ ಜೊತೆ ಸಂಪರ್ಕಿಸಿದ್ದಾರೆ. ಆದ್ದರಿಂದ ತಕ್ಷಣ ಅವರನ್ನು ಹಿಡಿಯುವುದಕ್ಕಾಗದಿದ್ದರೂ ಕೂಡ ನಿಧಾನವಾಗಿಯಾದರೂ ಪತ್ತೆ ಮಾಡುತ್ತೇವೆ. ಇವೊತ್ತು ಇವರಿಗೆ ಆಗಿರತಕ್ಕದ್ದು ಅಂದರೆ ಕವಿ ಹರಿದಿರುವುದು, ದೇಹಕ್ಕೆ ಬಾಧೆ ಆಗಿರುವುದು. ಆದರೆ ಅವರನ್ನು ನೋಡಿಕೊಂಡು ಬರುವುದಕ್ಕೆ ಮಾತ್ರ ನನಗೆ ಅನುಕೂಲ ಆಗಲಿಲ್ಲ.

ಶ್ರೀ ವಲ್ಲಿಕಾರ್ಜುನ ಎಂ. ಖರ್ಗೆ.—ಕೇವಲ ಳಿಗೆ ನಿಮಿಷ ಡಿಫರೆನ್ಸ್ ಇದೆ. ಈ ಳಿಗೆ ನಿಮಿಷದಲ್ಲಿ ಹಿಡಿಯುವುದಕ್ಕಾಗಲಿಲ್ಲ ಎಂದರೆ ಯಾವಾಗ ಹಿಡಿಯುತ್ತಾರೆ.

ಶ್ರೀ ಬಿ. ರಾಚಯ್ಯ.—ತಪ್ಪಿತಸ್ಥರನ್ನು ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ. ಈಗಲೇ ಪೂರ್ಣವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಪೂರ್ಣವಾದ ವಿವರಗಳು ಬಂದ ನಂತರ ಇಲ್ಲಿ ಹೇಳುತ್ತೇನೆ.

ನಿಯಮ ೩೩೪ರ ಮೇರೆಗೆ

1 ಹಾನಗಲ್ ತಾಲ್ಲೂಕಿನಲ್ಲಿ ಬೆಳೆ ವಿಮಾ ಪರಿಹಾರ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಬೆಳೆ ಸಾಲ ವಿಮಾ ಯೋಜನೆಯ ಅಡಿ, ಸಹಕಾರಿ ಸಂಘಗಳಿಂದ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದ ಹಣದ ಮೇಲೆ ವಿಮೆ ಮಾಡಿರುತ್ತಾರೆ. ಈ ವರ್ಷವು ಹಾನಗಲ್ ತಾಲ್ಲೂಕಿನಲ್ಲಿ ಭೀಕರ ಬರಗಾಲದ ಬವಣೆ ಇದ್ದು, ಬೆಳೆ ಬಾರದೆ ಅನೇಕರು ಮೇವಿಗಾಗಿ ಪರದಾಡುತ್ತಿದ್ದಾರೆ. ಬೆಳೆ ಸಾಲ ವಿಮಾ ಯೋಜನೆ ಅಡಿ ಬೆಳೆಗಳ ನಷ್ಟದ ಬಗ್ಗೆ ಪ್ರಯೋಗಗಳನ್ನು ಈಗಾಗಲೇ ಮಾಡಿ ಮುಗಿಸಿರುತ್ತಾರೆ. ಈ ವರ್ಷವೂ ಸಹಿತ ಕಳೆದ ವರ್ಷಕ್ಕಿಂತ ವಿಶೇಷವಾದ ವ್ಯತ್ಯಾಸವಿಲ್ಲದ ಬೆಳೆ ಬಂದಿರುತ್ತದೆ. ಹೀಗಾಗಿ ಈ ವರ್ಷವೂ ಬೆಳೆ ಸಾಲ ವಿಮೆಯಂ ಲಾಭ ರೈತರಿಗೆ ಸಿಗಬೇಕಾಗಿದೆ. ಸಾಲಗಾರನ ಸಾಲದ ಮರುಪಾವತಿ ಅವಧಿ ಫೆಬ್ರುವರಿ ೨೮ಕ್ಕೆ ಕೊನೆಗೊಳ್ಳುತ್ತದೆ. ವಿಮಾ ಯೋಜನೆಯವರು ತೀರ್ಮಾನ ಕೈಗೊಳ್ಳಲು ವಿಳಂಬ ಮಾಡಿದಷ್ಟು, ರೈತರಿಗೆ ತೊಂದರೆಯುಂಟಾಗುತ್ತದೆ. ಕಾರಣ, ಬೆಳೆ ಪ್ರಾತ್ಯಕ್ಷತೆಯ ಬಗ್ಗೆ ಸಂಬಂಧಪಟ್ಟ ಅಂಕಿಸಂಖ್ಯೆ ಇಲಾಖೆಗಳಿಂದ ತೀವ್ರವಾಗಿ ವಿಮಾ ಇಲಾಖೆಗೆ ಕಳುಹಿಸಿ ಬೇಗ ವಿಮಾ ಪರಿಹಾರದ ತೀರ್ಮಾನ ಕೈಗೊಳ್ಳುವಂತೆ ಕೃಷಿ ಇಲಾಖೆಯು ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುತ್ತೇನೆ. (ಮಾನ್ಯ ಕೃಷಿ ಸಂತ್ತು ತೋಟಗಾರಿಕೆ ಸಚಿವರ ಪರವಾಗಿ ಮಾನ್ಯ ಅಬಕಾರಿ ಮತ್ತು ಆರೋಗ್ಯ ಸಚಿವರಾದ ಶ್ರೀ ಹೆಚ್. ಟಿ. ಕೃಷ್ಣಪ್ಪ ಉತ್ತರಿಸಿದರು)

ಶ್ರೀ ಹೆಚ್. ಟಿ. ಕೃಷ್ಣಪ್ಪ (ಅಬಕಾರಿ ಮತ್ತು ಆರೋಗ್ಯ ಸಚಿವರು).— ಸ್ವಾಮಿ, ಕೇಂದ್ರ ಸರ್ಕಾರವು ೧೯೫೫-೫೬ರ ವರ್ಷಂಗಾರು ಹಂಗಾಮಿನಿಂದ ವ್ಯಾಪಕ ಬೆಳೆ ವಿಮಾ ಯೋಜನೆಯನ್ನು ಜಾರಿ

ಗೊಳಿಸಿದೆ. ೧೯೮೬-೮೭ರಲ್ಲಿ ಈ ಯೋಜನೆಯನ್ನು ರಾಜ್ಯದ ೧೯ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಯಿತು. ಈ ಕೆಳಕಂಡ ಬೆಳೆಗಳನ್ನು ೧೯೮೬-೮೭ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯಲ್ಲಿ ತರಲಾಗಿದೆ.

	ಋತುಮಾನ	ಬೆಳೆಗಳು
೧)	ಮುಂಗಾರು	ಭತ್ತ, ಜೋಳ, ರಾಗಿ, ಮುಸುಕಿನ ಜೋಳ, ಸಜ್ಜೆ, ಶೇಂಗಾ, ಸೂರ್ಯಕಾಂತಿ ಮತ್ತು ತೊಗರಿ
೨)	ಹಿಂಗಾರು	ಜೋಳ, ಗೋಧಿ, ಕಡಲೆ ಮತ್ತು ಕುಸುಮೆ
೩)	ಬೇಸಿಗೆ	ಭತ್ತ, ರಾಗಿ ಮತ್ತು ಶೇಂಗಾ

ಆಯ್ಕೆಯಾದ ಬೆಳೆಗಳು (ಆಹಾರ ಧಾನ್ಯ, ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು) ಮೇಲೆ ನಿರ್ಧರಿಸಿದ ಕ್ಷೇತ್ರದಲ್ಲಿ (ತಾಲ್ಲೂಕು) ವಾಣಿಜ್ಯ, ಸಹಕಾರಿ ಮತ್ತು ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳಿಂದ ಬೆಳೆ ಸಾಲ ಪಡೆದಿರುವ ಎಲ್ಲಾ ರೈತರಿಗೂ ಈ ಯೋಜನೆಯು ಕಡ್ಡಾಯವಾಗಿರುತ್ತದೆ.

ಭಾರತ ಸರ್ಕಾರದವರು ನೀಡಿರುವ ಮಾರ್ಗದರ್ಶನ ಪ್ರಕಾರ ಪ್ರತಿ ತಾಲ್ಲೂಕಿಗೆ ನಿಗದಿಪಡಿಸಿರುವ ಪ್ರಾರಂಭಿಕ ಇಳುವರಿಗಿಂತ ಕಡಿಮೆಯಾದಲ್ಲಿ ಅವರು ನಷ್ಟ ಪರಿಹಾರ ಧನವನ್ನು ಪಡೆಯಲು ಅರ್ಹರಾಗಿರುತ್ತಾರೆ. ನಷ್ಟ ಪರಿಹಾರವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗುವುದು.

* ಇಳುವರಿಯಲ್ಲಿ ಕೊರತೆ

* ರೈತರು ಮಾಡಿಸಿರುವ ಒಟ್ಟು ವಿಮೆ· ಪ್ರಾರಂಭಿಕ ಇಳುವರಿ

* (ನಿರ್ಧರಿತ ಕ್ಷೇತ್ರದಲ್ಲಿಯ ವಾಸ್ತವಿಕ ಸರಾಸರಿ ಇಳುವರಿಯನ್ನು ಪ್ರಾರಂಭಿಕ ಇಳುವರಿಯಿಂದ ಕಳೆದರೆ ಬರುವುದೇ ಇಳುವರಿಯ ಕೊರತೆ.)

ಈ ನಿರ್ಧರಿಸಿದ ಕ್ಷೇತ್ರವಾದ ತಾಲ್ಲೂಕಿನ ಸರಾಸರಿ ಇಳುವರಿಯ ಆಧಾರಿತ ಅಂಶಗಳನ್ನು ಪಡೆಯಲು ಪ್ರತಿ ಋತುಮಾನದ ಪ್ರತಿಬೆಳೆಗೆ ೧೬ ಬೆಳೆ ಕಟಾವು ಸಮೀಕ್ಷೆಗಳನ್ನು ಬೆಳೆ ವಿಮಾ ಯೋಜನೆಯಡಿಯಲ್ಲಿ ನಿಗದಿ ಮಾಡಲಾಗಿದೆ.

ಈ ಯೋಜನೆ ರೈತರಿಗೆ ಲಾಭದಾಯಕವಾಗಿದೆ. ೧೯೮೫ರ ಮುಂಗಾರು ಹಂಗಾಮಿನಲ್ಲಿ ೩.೦೩ ಕೋಟಿರೂ.ಗಳನ್ನು ನಷ್ಟ ಪರಿಹಾರದ ರೂಪದಲ್ಲಿ ವಿಮೆ ಮಾಡಿಸಿರುವ ರೈತರುಗಳಿಗೆ ನೀಡಲಾಗಿದೆ. ಇದರಲ್ಲಿ ೪೮.೫೮ ಲಕ್ಷ ರೂ.ಗಳನ್ನು ಹಾನಗಲ್ಲು ತಾಲ್ಲೂಕಿನ ರೈತರಿಗೆ ಪರಿಹಾರ ಕೊಡಲಾಗಿದೆ.

ರಾಜ್ಯದಲ್ಲಿ ೧೯೮೬ರ ಮುಂಗಾರಿನಲ್ಲಿ (ನವೆಂಬರ್ ೮೬ರ ಅಂತ್ಯದವರೆಗೆ) ಬೆಳೆ ವಿಮಾ ಯೋಜನೆಯಡಿಯಲ್ಲಿ ೧,೩೦,೩೨೮ ರೈತರು ಒಟ್ಟು ೩೪.೮೧ ಕೋಟಿ ರೂ.ಗಳನ್ನು ಆರಿಸಿದ ಬೆಳೆಗಳ ಮೇಲೆ ಬೆಳೆ ವಿಮೆ ಮಾಡಿದ್ದಾರೆ.

೧೯೮೬ರ ಮುಂಗಾರಿನಲ್ಲಿ ನಡೆಸಿರುವ ಬೆಳೆ ಕಟಾವು ಸಮೀಕ್ಷೆಯ ಫಲಿತಾಂಶಗಳು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಈಗ ಸಂಸ್ಕರಿಸಲ್ಪಡುತ್ತಿದೆ ಮತ್ತು ಇದನ್ನು ಶೀಘ್ರವಾಗಿ ಭಾರತೀಯ ಕೃಷಿ ಸಾಂಖ್ಯಿಕ ಸಂಶೋಧನಾ ಸಂಸ್ಥೆ ನವದೆಹಲಿ ಇವರಿಗೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಶೋಧನಾ ಸಂಸ್ಥೆಯು ಸರಾಸರಿ ಇಳುವರಿಯ ಬಗ್ಗೆ ಅಂತಿಮವಾಗಿ ತೀರ್ಮಾನಿಸಿ ಅದನ್ನು ಭಾರತೀಯ ವಿಮಾ ನಿಗಮಕ್ಕೆ ತಿಳಿಸುತ್ತಾರೆ. ಭಾರತೀಯ ವಿಮಾ ನಿಗಮದವರು ಈ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ಒದಗಿಸಿದ ತಕ್ಷಣ ಅರ್ಹರಾದ ರೈತರಿಗೆ ವಿಮಾ ಪರಿಹಾರವನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ವಿಮಾ ಪರಿಹಾರವನ್ನು ನೀಡಬೇಕಾದಲ್ಲಿ ಶೀಘ್ರವಾಗಿ ನೀಡಲು ಸೂಕ್ತ ಕ್ರಮಗಳನ್ನು ಕೃಷಿ ಇಲಾಖೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗಳು ಕೈಗೊಳ್ಳುತ್ತಿವೆ. ಭಾರತೀಯ ವಿಮಾ ನಿಗಮದಿಂದ ಪರಿಹಾರ ಬಂದ ನಂತರ ಹಾನಗಲ್ ತಾಲ್ಲೂಕಿನ ರೈತರಿಗೂ ಸಿಗಬೇಕಾದ ವಿಮಾ ಪರಿಹಾರದ ಇತ್ಯರ್ಥ ಮಾಡಲಾಗುವುದು.